ಕಾರ್ಯಕಲಾಪಗಳ ಪುಸ್ತಕವನ್ನು ಹರಿದು ಹಾಕುವುದು ಸರಿಯಲ್ಲ. ಮೊದಲು ಅವರು ಸಭಾಧ್ಯಕ್ಷರಿಗೆ ಗೌರವವನ್ನು ಕೊಡಬೇಕು. ಹೀಗೆ ಅಗೌರವವನ್ನು ಕೊಡತಕ್ಕಂಥಾದ್ದನ್ನು ಬೆಡಬೇಕು. ಇದು ಕ್ಷಮೆ ಕೊಡತಕ್ಕಂಥ ವಿಚಾರವಲ್ಲ. ಮಾನ್ಯ ಸದಸ್ಯರುಗಳು ಹೇಳಿದ್ದು ರೆಕಾರ್ಡ್‌ನಲ್ಲಿ ಹೋಗಿದೆ. ಅದನ್ನು ಕಡತದಿಂದ ತೆಗೆದು ಹಾಕಿಸಿಬೇಕು.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಈಗ ಏನು ಅಗೌರವದ ರೀತಿಯಲ್ಲಿ ಚರ್ಚೆಯಾಗಿದೆ ಅದು ಯಾವುದೂ ರೆಕಾರ್ಡ್‌ಗೆ ಹೋಗುವ ಹಾಗಿಲ್ಲ. it should not go for record. ಅವರು ಹೊರಗಡೆ ಹೋಗಿ ನ್ಯೂಸ್‌ಕ್ರಿಯೇಟ್ ಮಾಡುವುದಕ್ಕೆ ಹೊರತಾಗಿ ಇನ್‌ಫಾರ್ಮೇಷನ್‌ಗಾಗಿ ಚರ್ಚೆಮಾಡುತ್ತಿಲ್ಲ. You must direct that such things should not happen. ನಾವು ಎಲ್ಲರೂ ಶಾಂತ ರೀತಿಯಿಂದ ಕೇಳಿಕೊಂಡಿದ್ದೇವೆ. ಉತ್ತರವನ್ನು ಕೊಟ್ಟಿದ್ದೇವೆ. ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಯಾವ ದೇಶದಲ್ಲಿ ಯಾವ ರೂಲ್‌ಗಳ ಅಡಿಯಲ್ಲಿ ಕ್ಲಾರಿಫಿಕೇಶನ್ ಕೇಳುವುದಕ್ಕೆ ಸಾಧ್ಯ ಇದೆ ಸ್ವಾಮಿ?

ಅಧ್ಯಕ್ಷರು: ಅಂಥ ನಿಯಮಗಳು ಯಾವೊತ್ತೂ ಇಲ್ಲ. ಅದರಲ್ಲೂ 35 ಜನರು 185 ಜನರ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದೀರಲ್ಲ? 35 ಜನರು ಕೂಡಿ ಅವರ ಹಕ್ಕುಗಳನ್ನು ಮೊಟಕು ಮಾಡುತ್ತಿದ್ದೀರಲ್ಲಾ? ನಿಮಗೇನು ಅಧಿಕಾರವಿದೆ? Come on tell me. No,you have no right. 185 ಜನರು ಹಕ್ಕನ್ನು ಮೊಟಕು ಮಾಡುವ ನಿಮ್ಮ ಕ್ರಮಗಳು ಪ್ರಜಾಪ್ರಭುತ್ವವಲ್ಲ. ಹೀಗೆ ಮಾಡುವುದು ವಿರೋಧಪಕ್ಷದವರು ನಡವಳಿಕೆಯಲ್ಲ.

ಗೊಂದಲ

ಶ್ರೀ ಜಗದೀಶ ಶೆಟ್ಟರ್: ಮೆಜಾರಿಟಿ ಇದೆಯೆಂದು ಹೀಗೆಯೇ ನಡೆಸಿಕೊಂಡು ಹೋಗುವುದೇ?

ಗೊಂದಲ

ಅಧ್ಯಕ್ಷರು: ಇವೊತ್ತಿನ ದಿವಸ ಈ ಅರ್ಧ ಘಂಟೆಯಿಂದ ಗಲಾಟೆಗಳು ಏನು ಶುರುವಾಯಿತಲ್ಲಾ ಅದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ಬಿಲ್ ಪಾಸ್ ಆದದ್ದು ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ. ಬಿಲ್ಲನ್ನು ಹೇಗೆ ಪಾಸ್ ಮಾಡಿದ್ದೀರಿ? ಬಿಲ್ ಪಾಸ್ ಆಗಿಲ್ಲ.... ಬಿಲ್ ಪಾಸ್ ಆದುದು ರೆಕಾರ್ಡ್ ಆಗಿಲ್ಲ.

ಅಧ್ಯಕ್ಷರು: ಆ ಗಲಾಟೆ ಮಾತ್ರ ರೆಕಾರ್ಡ್‌ಗೆ ಹೋಗಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಬಿಲ್‌ಗಳು ಪಾಸಾಗಿವೆ ಹಾಗೂ ರೆಕಾರ್ಡ್‌ಗೆ ಹೋಗಿರುತ್ತವೆ. ಈ ದಿನ ಸಭೆಯಲ್ಲಿ ಏನು ನಡೆಯಿತಲ್ಲಾ ಇದನ್ನು ಜನರು ಯಾವ ರೀತಿಯಲ್ಲಿ ಮೆಚ್ಚುತ್ತಾರೋ ದೇವರೇ ಬಲ್ಲರು. ಅರ್ಥವಾಯಿತೇ? 35 ಜನರು 185 ಜನರ ಹಕ್ಕನ್ನು ಮೊಟಕುಗೊಳಿಸುತ್ತಿದ್ದಾರೆಂದು ನಾನು ಹೇಳಿದ್ದೇನಲ್ಲಾ? ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

3. ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೆಯ ವಿಧಾನಸಭೆಯ ಆರನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 9ನೇ ಜುಲೈ, 2003 ರಂದು ಸಮಾವೇಶಗೊಂಡು, ದಿನಾಂಕ 8ನೇ ಆಗಸ್ಟ್, 2003 ರವರೆಗೆ

ಒಟ್ಟು 23 ದಿನಗಳ ಉಪವೇಶನ ನಡೆದು 105.52 ಗಂಟೆಗಳ ಕಾಲ ಸರ್ಕಾರಿ ಹಾಗೂ ಖಾಸಗಿ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ.

ಈ ಅಧಿವೇಶನದ ಪ್ರಾರಂಭದಲ್ಲಿ ಇತ್ತೀಚೆಗೆ ನಿಧನ ಹೊಂದಿದ ವಿಧಾನ ಸಭೆಯ ಹಾಲಿ ಸದಸ್ಯರು ಹಾಗೂ ಮಾಜಿ ಸಚಿವರುಗಳಾದ ಶ್ರೀ ಎಸ್.ಆರ್.ಕಾಶಪ್ಪನವರ್,ಶ್ರೀ ಸಿ.ಬೈರೇಗೌಡ, ಲೋಕಸಭೆ ಹಾಗೂ ವಿಧಾನಸಭಾ ಮಾಜಿ ಸದಸ್ಯರುಗಳಾದ ಶ್ರೀಮತಿ ಶೀಲಾ ಇರಾನಿ, ಶ್ರೀ ಸಿ.ಎನ್.ಭಾಸ್ಕರಪ್ಪ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಟಿ.ಪಿ.ಬೋರಯ್ಯ ಶ್ರೀ ಎಸ್.ಅಜ್ಜೀಬಾಳ ಹೆಗಡೆ, ಶ್ರೀ ಕೈಸರ್ ಮಹಮೂದ್ ಮಣಿಯಾರ್, ಶ್ರೀ ಅಬ್ದುಲ್ ಸುಭಾನ್, ಶ್ರೀ ಕೆ.ಎಂ.ಪಳಿನಿಯಪ್ಪನ್, ಶ್ರೀ ಕೆ.ಎಂ.ಗಂಗಲ್, ಡಾ: ಕೆ.ಎಸ್.ಗೌಡಯ್ಯ ಹಾಗೂ ಕನ್ನಡದ ಸಾಹಿತಿಗಳಾದ ಪ್ರೊ: ಕೀರ್ತಿನಾಥ ಕುರ್ತಕೋಟಿ ಅವರ ಗೌರವಾರ್ಥ ಸಂತಾಪ ನಿರ್ಣಯಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ.

ಸದರಿ ಅಧಿವೇಶನದಲ್ಲಿ 2003–2004ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ 11 ಜನ ಸದಸ್ಯರು ಭಾಗವಹಿಸಿದ್ದು, ಸುದೀರ್ಘ ಚರ್ಚೆಯ ನಂತರ ದಿನಾಂಕ 30.07.2003 ರಂದು ಮಾನ್ಯ ಮುಖ್ಯಮಂತ್ರಿಗಳ ಉತ್ತರದೊಂದಿಗೆ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿ, ಪ್ರಸ್ತಾವನೆಯನ್ನು ಅಂಗೀಕರಿಸಿ, ಧ್ವನಿಮತದಿಂದ ಸದನವು ಅನುಮೋದನೆಯನ್ನು ನೀಡಿರುತ್ತದೆ. ಅಲ್ಲದೆ ದಿನಾಂಕ 05.08.2003 ರಂದು 2003–2004ನೇ ಸಾಲಿನ ಪೂರಕ ಅಂದಾಜು (ಮೊದಲನೇ ಕಂತು) ಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು, ಅದೇ ದಿನ ಅಂದರೆ ದಿನಾಂಕ: 05.08.2003ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಸದರಿ ಅವಧಿಯಲ್ಲಿ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಹದಿನೈದು ವಿಷಯ ಸಮಿತಿಗಳ ವರದಿಗಳನ್ನು, ಜರಿಟಿ ಪರಿಶೀಲನಾ ಸಮಿತಿಯ ವರದಿಯನ್ನು ಮತ್ತು ವಿವಿಧ ಸ್ಥಾಯಿ ಸಮಿತಿಗಳ 12 ವರದಿಗಳನ್ನು ಮಂಡಿಸಲಾಗಿದೆ.

2003–2004ನೇ ಸಾಲಿನ ಸ್ಥಾಯಿ ಸಮಿತಿಗಳಿಗೆ ಮತ್ತು ರಾಜೀವ್ ಗಾಂಧಿ ವಿಜ್ಞಾನಿಗಳ ವಿಶ್ವವಿದ್ಯಾನಿಲಯ ಸೆನೆಟ್‌ಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಸದನವು ಸಭಾಧ್ಯಕ್ಷರಿಗೆ ಅಧಿಕಾರವನ್ನು ವಹಿಸಿದೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ 7 ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಒಂದು ನಿಲುವಳಿ ಸೂಚನೆಯನ್ನು 159ರನ್ನಾಗಿ ಪರಿವರ್ತಿಸಿ,. ಕಳೆದ ಮೂರು ವರ್ಷಗಳಿಂದ ಸತತವಾಗಿ ಇರುವ ಬರಗಾಲದಿಂದ ರಾಜ್ಯದಲ್ಲಿ ರೈತರು ಸಂಕಷ್ಟಕ್ಕೆ ಗುರಿಯಾಗಿರುವುದರ ಕುರಿತು ಸುದೀರ್ಘವಾಗಿ ಚರ್ಚಿಸಿ ಸರ್ಕಾರದ ವತಿಯಿಂದ ಉತ್ತರವನ್ನು ನೀಡಲಾಗಿದೆ ಮತ್ತು ಒಂದು ಸೂಚನೆಯನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಪರಿವರ್ತಿಸಲಾಗಿದೆ. ನಿಯಮ 69 ರಡಿಯಲ್ಲಿ 16 ಸೂಚನೆಗಳನ್ನು ಸ್ವೀಕರಿಸಿದ್ದು, ಪ್ರಮುಖವಾಗಿ ವೃತ್ತಿ ಶಿಕ್ಷಣ ಶುಲ್ಕ ನೀತಿ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷಾ ಹಾಗೂ ರಾಜ್ಯದ ಹೊಸ ಯೋಜನೆಯಾದ ಅಕ್ಷರ ದಾಸೋಹ ಯೋಜನೆಯಲ್ಲಿ ಮಕ್ಕಳಿಗೆ ಬಿಸಿಯೂಟ ನೀಡಿದ್ದು, ಮಕ್ಕಳು ಅಸ್ವಸ್ಥರಾಗಿರುವ ಬಗ್ಗೆ ಚರ್ಚಿಸಲಾಯಿತು. ಎರಡು ಸೂಚನೆಗಳಿಗೆ ವರದಿಯನ್ನು ತರಿಸಲಾಗಿದೆ.

ಸದರಿ ಅವಧಿಯಲ್ಲಿ ಅರ್ಧಘಂಟೆ ಕಾಲಾವಧಿ ಚರ್ಚೆಯಲ್ಲಿ ರಾಜ್ಯದಲ್ಲಿನ ತೆಂಗಿನ ಮರಗಳು ಒಣಗುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದ್ದು, 7 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದು, ಸರ್ಕಾರದಿಂದ ಉತ್ತರಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು 2755 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಿದ್ದು, 380 ಚುಕ್ಕೆ ಗುರುತಿನ ಪ್ರಶ್ನೆಗಳ ಪೈಕಿ 282 ಪ್ರಶ್ನೆಗಳಿಗೆ ಹಾಗೂ 2301 ಚುಕ್ಕೆ ರಹಿತ ಪ್ರಶ್ನೆಗಳ ಪೈಕಿ 1712 ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ 45 ಪ್ರಶ್ನೆಗಳಿಗೆ ವರದಿಯನ್ನು ಸ್ವೀಕರಿಸಲಾಗಿರುತ್ತದೆ. 36 ಪ್ರಶ್ನೆಗಳು ತಿರಸ್ಕೃತಗೊಂಡಿವೆ.

ಸದರಿ ಅವಧಿಯಲ್ಲಿ 173 ಸಭೆಯ ಮುಂದಿಡಲಾದ ಕಾಗದ ಪತ್ರಗಳನ್ನು ಸದನಕ್ಕೆ ಒಪ್ಪಿಸಲಾಗಿದೆ. ಈ ಅವಧಿಯಲ್ಲಿ 03 ಗಮನ ಸೆಳೆಯುವ ಸೂಚನೆಗಳು ಚರ್ಚೆಯಾಗಿರುತ್ತವೆ. ಶೂನ್ಯ ವೇಳೆಯಲ್ಲಿ 42 ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ಈ ಅಧಿವೇಶನದಲ್ಲಿ " ಸಂಸತ್ತಿನ ಉಭಯ ಸದನಗಳ ಮೂಲಕ ಅಂಗೀಕರಿಸಲಾದಂತೆ ಸಂವಿಧಾನ (ತೊಂಭತ್ತೈದನೇ ತಿದ್ದುಪಡಿ) ವಿಧೇಯಕ 2003 ರಲ್ಲಿ ಮಾಡಲು ಉದ್ದೇಶಿಸಿರುವ, ಭಾರತ ಸಂವಿಧಾನದ 368ನೇ ಅನುಚ್ಛೇದ (2)ನೇ ಖಂಡದ ಪರಂತುಕದ (ಸಿ) ಖಂಡದ ವ್ಯಾಪ್ತಿಯೊಳಗೆ ಬರುವ ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ".

ಈ ಅಧಿವೇಶನದಲ್ಲಿ ಧನವಿನಿಯೋಗ ವಿಧೇಯಕಗಳು ಸೇರಿದಂತೆ, ವಿಧಾನ ಪರಿಷತ್ತಿನ ವಿಧೇಯಕಗಳನ್ನೊಳಗೊಂಡಂತೆ 18 ವಿಧೇಯಕಗಳನ್ನು ಪರ್ಯಾಲೋಚಿಸಿ, ಚರ್ಚೆಯ ನಂತರ ಅಂಗೀಕರಿಸಲ್ಪಟ್ಟಿರುತ್ತವೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ಎಲ್ಲಾ ದೂರದರ್ಶನ ಮಾಧ್ಯಮಗಳಿಗೂ, ಅಂತರ್ಜಾಲದಲ್ಲಿ ಬರಲು ಸಹಕರಿಸಿದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಶೇಷವಾಗಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಾನು ಕೊನೆಯಲ್ಲಿ ಇಷ್ಟೇ ಹೇಳುವುದು. ಇವೊತ್ತು ಪ್ರಜಾಪ್ರಭುತ್ವದಲ್ಲಿ 35 ಜನರು 185 ಜನರು ಹಕ್ಕನ್ನು ಮೊಟಕು ಮಾಡುತ್ತಾ ಇದ್ದಾರೆ. ಇದನ್ನು ನಾನು ಸಹಿಸುವುದಿಲ್ಲ. ಈ ರೀತಿಯಾಗಿ ಮುಂದೆ ಮಾಡಬೇಡಿ ಎಂದು ರಿಕ್ವೆಸ್ಟ್ ಮಾಡಿ ಕೊಂಡು ಈಗ ಸದನವನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.27 ಘಂಟೆಗೆ ಅನಿರ್ಧಿಷ್ಟಕಾಲದವರೆಗೆ ಮುಂದೂಡಲ್ಪಟ್ಟಿತು.)

4. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಅಧ್ಯಕ್ಷರು: ಈ ದಿನದ ಪಟ್ಟಿಯಲ್ಲಿರುವ ಪ್ರಶ್ನೋತ್ತರಗಳನ್ನು ನಡವಳಿಕೆಯಲ್ಲಿ ಸೇರಿಸಲಾಗಿದೆ. (ಅನುಬಂಧ I)